ಮೂಲ ದಾವಾ ಸಂಖ್ಯೆ. 127/2017 ಪಿ ಡಬ್ಲ್ಯೂ 3

(ದಿನಾಂಕ 09-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)
ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ವಿ ಎನ್ ವಕೀಲರಿಂದಃ-

ನನ್ನ ತಾಯಿಯ ಹೆಸರು ಕೊಟ್ರಬಸಮ್ಮ. ಅವರನ್ನು ಕೋಡಿಹಳ್ಳಿ ಗ್ರಾಮಕ್ಕೆ ವಿವಾಹ ಮಾಡಿಕೊಟ್ಟಿದ್ದರು. ನಮ್ಮ ತಾಯಿಯ ತಂದೆಗೆ ನನ್ನ ತಾಯಿಯೇ ಹಿರೆಮಗಳು ಎಂದರೆ ಸರಿಯಲ್ಲ. ನನ್ನ ತಾಯಿಯ ತಂದೆಗೆ ವಾದಿಯ ತಾಯಿ 2 ನೇ ಮಗಳು ಎಂದರೆ ಸರಿ. ಸನ್ 1961 ರಲ್ಲಿ ನಮ್ಮ ಅವ್ವನ ತಾಯಿ ಸಾವಂತ್ರವ್ವ ಇವರಿಗೆ ಸೆಟ್ಲಮೆಂಟ್ ಡೀಡ್ ಬರೆದುಕೊಟ್ಟರು. 3.40 ಎಕರೆ ಜಮೀನಿಗೆ ಸೆಟ್ಲಮೆಂಟ್ ಡೀಡ್ ಮಾಡಿಕೊಟ್ಟಿದ್ದರು. ನಮ್ಮ ಭಾಗಕ್ಕೆ ಬಂದ ಆಸ್ತಿಯನ್ನು ನಾವು ಮಾರಾಟ ಮಾಡಿದ್ದೇವೆ. ನಮ್ಮ ಭಾಗಕ್ಕೆ ಬಂದ ಆಸ್ತಿಯನ್ನು ನಾವು ಮಾರಾಟ ಮಾಡಿದ ವಿಚಾರ ವಾದಿಯ ಮಗ ಕಡ್ಲೆಪ್ಪ ಇವರಿಗೆ ಗೊತ್ತಿತ್ತು ಎಂದರೆ ಸರಿ. ಸದರಿ ಆಸ್ತಿಯನ್ನು ಮಾರಾಟ ಮಾಡಲು ಕಡ್ಲೆಪ್ಪ ಇವರು ಯಾವುದೇ ತಕರಾರು ಮಾಡಿಲ್ಲ. ನಮ್ಮ ಪಾಲಿಗೆ ಬಂದ ಜಮೀನನ್ನು ನಾವು ಮಾರಾಟ ಮಾಡಿದ ನಂತರ ನಾನು ಅಥವಾ ನಮ್ಮ ಅಕ್ಕ ಆ ಜಮೀನಿಗೆ ಹೋಗಿಲ್ಲವೆಂದರೆ ಸರಿಯಲ್ಲ.

ನಾನು ಮತ್ತು ನನ್ನ ಅಕ್ಕ ಕೋಡಿಹಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತೇವೆ. ನನ್ನ ಅಜ್ಜಿಯ ಹೆಸರು ಹನುಮಮ್ಮ ಎಂದರೆ ಸರಿ. ಅವಳು ಸಣ್ಣಕರಿಯಪ್ಪರವರ ಹೆಂಡತಿ ಎಂದರೆ ಸರಿ. ಸಣ್ಣಕರಿಯಪ್ಪನಿಗೆ ದೊಡ್ಡಕರಿಯಪ್ಪ ಎಂಬ ಸಹೋದರನಿದ್ದ ಎಂದರೆ ಸರಿ. ಸದರಿ ದೊಡ್ಡಕರಿಯಪ್ಪನಿಗೆ 2 ಜನ ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣುಮಗಳು ಇದ್ದರೆಂದರೆ ಸರಿ. ಅವರ ದೊಡ್ಡಮಗನ ಹೆಸರು ಹುಲುಗಪ್ಪ, 2 ನೇದವರ ಹೆಸರು ದೊಡ್ಡನಾಗಪ್ಪ ಎಂದರೆ ಸರಿ ಅವರ ಮಗಳ ಹೆಸರು ಭರಮವ್ವ ಎಂದರೆ ಸರಿ. ಸದರಿ ಭರಮವ್ವನಿಗೆ 1 ನೇ ಪ್ರತಿವಾದಿ ಮತ್ತು ನಾಗೇಂದ್ರಮ್ಮ ಎಂಬ ಮಕ್ಕಳು ಎಂದರೆ ಸರಿ. ಹುಲುಗಪ್ಪನ ಹೆಂಡತಿ ಹೆಸರು ಕರಿಯಮ್ಮ ಎಂದರೆ ಸರಿ. ದಾವಾಸ್ತಿಯನ್ನು ಕರಿಯಮ್ಮ ನಾಗಪ್ಪ ಸೇರಿ 1 ನೇ ಪ್ರತಿವಾದಿ ಹೆಸರಿಗೆ ಹಕ್ಕುಬಿಡುಗಡೆ ಪತ್ರದ ಮೂಲಕ ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ, ಅದರ ಆಧಾರದ ಮೇಲೆ 1 ನೇ ಪ್ರತಿವಾದಿಯ ಹೆಸರಿಗೆ ಪಹಣಿಯಾಗಿದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಸನ್ 2019 ರಲ್ಲಿ 2 ನೇ ಪ್ರತಿವಾದಿಯ ಹೆಸರಿಗೆ ದಾವಾಸ್ತಿಗೆ ಸಂಬಂಧಿಸಿದಂತೆ ದಾನಪತ್ರ ಮಾಡಿಕೊಟ್ಟಿರುತ್ತಾರೆಂದರೆ ಸುಳ್ಳು. 2 ನೇ ಪ್ರತಿವಾದಿಯು ದಾವಾಸ್ತಿಯ ಸ್ವಾಧೀನದಲ್ಲಿರುತಾರೆ ಮತ್ತು ಅವರ ಹೆಸರಿನಲ್ಲಿ ಪಹಣಿ ಇದೆ ಎಂದರೆ ಸರಿಯಲ್ಲ. ದಾವಾಸ್ತಿಯು ದೊಡ್ಡಕರಿಯಪ್ಪನಿಗೆ ಸೇರಿದ ಆಸ್ತಿಯಾಗಿದ್ದು ಅದರಲ್ಲಿ ಸಣ್ಣಕರಿಯಪ್ಪನಿಗೆ ಮತ್ತು ಅವರ ವಾರಸುದಾರರಿಗೆ ಯಾವುದೇ

ಹಕ್ಕು ಅಧಿಕಾರ ಇರುವುದಿಲ್ಲವೆಂದರೆ ಸರಿಯಲ್ಲ. ದಾವಾಸ್ತಿಯನ್ನು ಕಬಳಿಸಲು ವಾದಿಯು ಸುಳ್ಳು ದಾವೆಯನ್ನು ದಾಖಲಿಸಿದ್ದು ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ